ಅಧ್ಯಕ್ಷರು : ನಾಳೆ ಅಂತೂ ಆಗುವುದಿಲ್ಲ. ನಾಳೆ ಶಾಸಕರ ದಿನಾಚರಣೆ ಇದೆ.

ಶ್ರೀ ಆರ್. ವಿ. ದೇಶಪಾಂಡೆ : ನಾವು ಬೇಗನೆ ಮುಗಿಸುತ್ತೇವೆ.

ಅಧ್ಯಕ್ಷರು : 7ನೇ ತಾರೀಖು ಇದನ್ನು ತೆಗೆದುಕೊಳ್ಳೋಣ. ತಾವು ನೋಟೀಸನ್ನು ಕೊಟ್ಟಿದ್ದೀರಿ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು :

1. ಮಾನ್ಯ ಗೃಹ ಸಚಿವರ ಹಾಗೂ ಮಾನ್ಯ ವಸತಿ ಸಚಿವರ ವಿರುದ್ಧ ಚರ್ಚೆಗೆ ಮುಖ್ಯಮಂತ್ರಿಗಳಿಂದ ಹೇಳಿಕೆಗೆ ಒತ್ತಾಯ.

ಶ್ರೀ ಆರ್.ವಿ. ದೇಶಪಾಂಡೆ : ವಸತಿ ಸಚಿವರ ವಿರುದ್ಧ ನಾವು ಸಾಕಷ್ಟು ಚರ್ಚೆ ಮಾಡಿದ್ದೆವು. ಅವರು ಉತ್ತರ ಕೊಡುವುದಕ್ಕೆ ಸಮಯವನ್ನು ತೆಗೆದುಕೊಂಡರು. ಇನ್ನೂ ಅವರಿಂದ ಉತ್ತರ ಬಂದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡಬೇಕಾಗಿದೆ. ನಿರ್ಣಯ ಮಾಡುವುದು ಅದು ಬೇರೆ ಪ್ರಶ್ನೆ. ಚರ್ಚೆಗೆ ಒಂದು ಹಂತ ಆಗಬೇಕಲ್ಲ, ಅದು ಆಗುತ್ತಿಲ್ಲ. ನಾನು ಕೈಗಾ ಬಗ್ಗೆ ರೈಜ್ ಮಾಡಿದ್ದೆ. ಮುಖ್ಯ ಮಂತ್ರಿಗಳು ಇವತ್ತು ರಿಪ್ಲೈ ಮಾಡುತ್ತೇವೆ ಎಂದು ಹೇಳಿದ್ದರು. ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಸರ್ಕಾರದಿಂದ ಸರಿಯಾದ ಸಮಯದಲ್ಲಿ ಉತ್ತರ ಬಂದರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ : ಇವತ್ತು ಉತ್ತರ ಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಈ ವಿಚಾರ, ಬಹಳ ದಿವಸಗಳಿಂದ ಪೆಂಡಿಂಗ್ ಇದೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಕೆಲವು ನಿಮಿಷಗಳಲ್ಲಿಯೇ ಇದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಅದರ ನಂತರ ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಉತ್ತರವನ್ನು ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ತಾವು ಯಾವುದೇ ಒಂದು ವಿಚಾರವನ್ನು ಕ್ರಮವತ್ತಾಗಿ ಇಲ್ಲಿ ಎತ್ತುವುದಕ್ಕೆ ನಮ್ಮದೇನೂ ಅಡ್ಡಿ ಇಲ್ಲ. ಮೊನ್ನೆ ಮಾನ್ಯ ಗೋಪಿನಾಥ ಸಾಂಡ್ರಾರವರ ವಿಚಾರದ ಬಗ್ಗೆ ಹೇಳಿದ್ದೀರಿ. ಅವರ ಉತ್ತರ ರೆಡಿಯಾಗಿದೆ. ಬೇಕಾದರೆ ಇವತ್ತೇ ತೆಗೆದುಕೊಳ್ಳಬಹುದು ಅಥವಾ ಸಂಜೆ ತೆಗೆದುಕೊಳ್ಳಬಹುದು. ಮಾನ್ಯ ಚೌಡರೆಡ್ಡಿಯವರ ಬಗ್ಗೆ ತಾವು ನೋಟೀಸ್ ಕೊಟ್ಟಿದ್ದೀರಿ. ಅದರ ಪ್ರಕಾರ ಅವರೇ ಇದ್ದು ಉತ್ತರ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ತಾವು ರೈಜ್ ಮಾಡುವುದು, ಅವರು ನಾಳೆ ಉತ್ತರ ಕೊಡುವುದು, ಅದು ಬೇಕಾಗಿಲ್ಲ. ಅವರೂ ಕೂಡ ತಮ್ಮ ಉತ್ತರವನ್ನು ಸಿದ್ಧಪಡಿಸಿಕೊಳ್ಳಲಿ. 7ನೇ ತಾರೀಖು ಈ ವಿಷಯ ತೆಗೆದುಕೊಂಡರೆ ಅದಕ್ಕೆ ಉತ್ತರ ತಯಾರಾಗಿರುತ್ತದೆ.

12.20 ಪಿ.ಎಂ

ಈಗ ಪ್ರಸ್ತಾಪಿಸಿ ಹಾಗೆಯೇ ಬಿಟ್ಟರೆ ಏನು ಪ್ರಯೋಜನ. ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಇದಕ್ಕೆ ಸ್ವಲ್ಪ ಸಮಯ ಕೊಡಬೇಕಾಗುತ್ತದೆ. ಸಹಜ ನ್ಯಾಯ ಸಿಗಬೇಕಾದರೆ ಸ್ವಲ್ಪ ಕಾಲಾವಕಾಶ ಕೊಡಬೇಕಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಮುಖ್ಯಮಂತ್ರಿಗಳು 116 ಎಂದು ಏನು ಹೇಳುತ್ತಿದ್ದಾರೋ ಅದನ್ನು ಒಪ್ಪಿಕೊಳ್ಳುತ್ತೇನೆ. ನಾನು 27ನೇ ತಾರೀಖಿನಂದೇ ಈ ಕುರಿತು ಸದನದಲ್ಲಿ ಚರ್ಚಿಸುವುದಕ್ಕಾಗಿ ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ಸದನದಲ್ಲಿ ಸಚಿವರು ಹಾಜರಿರಬೇಕಾದದ್ದು ಅವರ ಜವಾಬ್ದಾರಿಯೇ ಹೊರತು ನನ್ನದಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ತಾವು ಈ ವಿಚಾರವನ್ನು ಪ್ರಸ್ತಾಪಿಸುತ್ತೀರೆಂದು ನಮಗೆ ಹೇಗೆ ಗೊತ್ತಾಗಬೇಕು? ವಿಷಯವನ್ನು ತಾವು ಯಾವಾಗ ಬೇಕಾದರೂ ಪ್ರಸ್ತಾಪಿಸಿ, ಏನೂ ತೊಂದರೆಯಿಲ್ಲ. ಈ ಬಗ್ಗೆ ತಾವು ನೋಟೀಸ್ ಕೊಟ್ಟಿದ್ದೀರಿ. ಇದು ವೈಯಕ್ತಿಕಕ್ಕೆ ಸಂಬಂಧಿಸಿದ ವಿಚಾರವಾದುದರಿಂದ ಸಂಬಂಧಿಸಿದ ಮಂತ್ರಿಗಳೇ ಉತ್ತರ ಕೊಡಬೇಕು. ಸರ್ಕಾರದ ವಿಚಾರವಾದರೆ ಅದಕ್ಕೆ ತಕ್ಷಣ ನಾವು ಉತ್ತರ ಕೊಡಬಹುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸಚಿವರು 2ನೇ ತಾರೀಖಿನಂದು ಉತ್ತರ ಕೊಡುತ್ತೇವೆಂದು ಹೇಳಿದ್ದರು, ಇನ್ನೂ ಕೊಟ್ಟಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ತಾವು ಸಚಿವರನ್ನು ಕರೆಯಬಹುದು. ನಾವು ಬೇಕಾದರೆ 15 ನಿಮಿಷ, ಇಲ್ಲವೆ ಅರ್ಧ ಗಂಟೆವರೆಗೂ ಕಾಯುವುದಕ್ಕೆ ತಯಾರಾಗಿದ್ದೇವೆ. ಏಕೆಂದರೆ, ನಾವು ಅನೀರೀಕ್ಷಿತವಾಗಿ ವಿಷಯವನ್ನು ಪ್ರಸ್ತಾಪಿಸುತ್ತಿಲ್ಲ. 27ನೇ ತಾರೀಖಿನಂದೇ ನೋಟೀಸ್ ಕೊಟ್ಟಿದ್ದು ವಿಷಯ ಬಹಳ ಗಂಭೀರವಾಗಿದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇದು ವೈಯಕ್ತಿಕವಾಗಿ ಆಪಾದನೆ ಮಾಡಿರುವಂಥ ವಿಚಾರವಾಗಿದ್ದು, ಸಂಬಂಧಪಟ್ಟ ಸಚಿವರು ಮೇಲ್ಮನೆಯಲ್ಲಿದ್ದಾರೆ. ಅವರು ಇಲ್ಲಿಗೆ ಬರುತ್ತಾರೆ, ಬಂದು ಉತ್ತರ ಕೊಡಬಹುದು. ಆದರೆ, ನಾನು ಹೇಳುತ್ತಿರುವುದೆನೆಂದರೆ, ಸರ್ಕಾರಕ್ಕೆ ಸಂಬಂಧಿಸಿದ ವಿಚಾರವೇನಾದರೂ ಇದ್ದಲ್ಲಿ ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೆ. ವೈಯಕ್ತಿಕವಾಗಿ ವಿವರಣೆ ಕೊಡುವುದು ಅವರ ಹಕ್ಕು. He does not exercise that right. ಅದನ್ನು ಕೇಳುವಂಥ ಪ್ರಮೇಯ ನಿಮಗೆ ಎಲ್ಲಿ ಬರುತ್ತದೆ? ನಿಮ್ಮ ಆಪಾದನೆ ಏನಿದೆ, ಅದು ಹಾಗೆ ಉಳಿಯುತ್ತದಷ್ಟೆ. ಅವರು ತಮ್ಮ ಮೇಲಿದ್ದ ಆಪಾದನೆಯನ್ನು ಆಗಲೇ ಒಂದು ಸಾರಿ ನಿರಾಕರಿಸಿದ್ದಾರೆ. ಇದರ ಪುನಃ ನಿರಾಕರಣೆಗಾಗಿ ಪೂರ್ಣ ವಿವರಣೆ ಕೊಡುತ್ತೇನೆಂದು ಹೇಳಿದ್ದಾರೆ. ಅವರು ತಮ್ಮ ವಿವರಣೆ ಕೊಡಲು ತಯಾರಾಗಿದ್ದಾರೆ, ಈಗ ಮೇಲ್ಮನೆಯಲ್ಲಿ ಹಾಜರಾಗಿರುವುದರಿಂದ ಇಲ್ಲಿಗೆ ನಂತರ ಬರುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ವಿಷಯವನ್ನು ಬೆರೆಸುತ್ತಿದ್ದಾರೆ. ಅವರು ನಿರಾಕರಣೆ ಮಾಡಿರುವುದು ಯಾವ ವಿಷಯದ ಬಗ್ಗೆ ಎಂದರೆ, ಇಂಡಿಯನ್ ಎಕ್ಸ್‌ಪ್ರೆಸ್. ಪತ್ರಿಕೆಯಲ್ಲಿ ಒಂದು ಸುದ್ದಿ ಪ್ರಕಟವಾಗಿದ್ದು, ಒಂದು ಚಿತ್ರಮಂದಿರದ ಮನೋರಂಜನಾ ತೆರಿಗೆಯನ್ನು ತಪ್ಪಿಸಿದ್ದಕ್ಕಾಗಿ ಮತ್ತು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದರ ಬಗ್ಗೆ ಮೇಲ್ಮನೆಯಲ್ಲಿ ಉತ್ತರ

ಕೊಟ್ಟು ತಮ್ಮ ಮೇಲಿನ ಆಪಾದನೆಯನ್ನು ನಿರಾಕರಿಸಿದ್ದಾರೆ. ಆದರೆ, ನಾವು ಮಾಡುತ್ತಿರುವ ಆಪಾದನೆ ಬೇರೆ ವಿಚಾರಕ್ಕೆ ಸಂಬಂಧಿಸಿದೆ. ಏನೆಂದರೆ, ಒಂದು ಕೊಲೆಗೆ ಸಂಬಂಧಿಸಿದ ಆರೋಪಿಯ ಜೊತೆಗೆ ಮಾನ್ಯ ಸಚಿವರು ಒಂದು ಮೆರವಣಿಗೆಯನ್ನು ಪಾಲ್ಗೊಂಡಿದ್ದಾರೆ. ಸದರಿ ಕೊಲೆ ಕೇಸಿನ ವಿಚಾರಣೆ ನಡೆಯುತ್ತಿದ್ದು, ಕೇಸ್ ನಂಬರ್ 1 ಮತ್ತು 5, ಮತ್ತು ಇದಕ್ಕೆ ಸಂಬಂಧಿಸಿದಂತೆ ಫೋಟೋ ಸಹ ನನ್ನ ಹತ್ತಿರ ಇದೆ. ಈ ರಾಜ್ಯದ ಒಬ್ಬ ಗೃಹ ಮಂತ್ರಿಗಳು ಕೊಲೆ ಮಾಡಿದ ಆರೋಪಿಯ ಜೊತೆ ಮೆರವಣಿಗೆಯಲ್ಲಿ ಹೋಗಿದ್ದಾರೆ. He is in procession with the Accused, who was involved in a murder case under 302. ಇದು ಬಹಳ ಮುಖ್ಯವಾದ ವಿಷಯ. ಇದರ ಬಗ್ಗೆಸದನದಲ್ಲಿ ಇನ್ನೂ ಚರ್ಚೆ ಆಗಿಲ್ಲದಿರುವುದರಿಂದ ಪ್ರಸ್ತಾಪ ಮಾಡಿದ್ದೇನೆ. ತಾವು ಹೇಳಿದ ಒಂದು ಮಾತನ್ನು ಒಪ್ಪಿಕೊಳ್ಳುತ್ತೇನೆ. ಏನೆಂದರೆ, ಸಚಿವರು ಸದನದಲ್ಲಿರಬೇಕು, ಅವರಿಗೆ ಉತ್ತರ ಕೊಡುವ ಹಕ್ಕು ಇದೆ, ಅದನ್ನು ಕಸಿದುಕೊಳ್ಳುವುದಕ್ಕಾಗುವುದಿಲ್ಲ, ಎಂದು. ಒಂದು ವೇಳೆ ನಾವು ತಪ್ಪು ಆಪಾದನೆ ಮಾಡಿದ್ದರೆ ಅವರು ತಮ್ಮ ವಿವರಣೆ ಕೊಟ್ಟು ಕನ್‌ವಿನ್ಸ್ ಮಾಡಬಹುದು. ಆದರೆ, ಮುಖ್ಯಮಂತ್ರಿಗಳು ಸದನದಲ್ಲಿರುವುದರಿಂದ ನಮ್ಮ ಬೇಡಿಕೆ ಏನಿದೆಯೋ ಅದನ್ನು ಫುಲ್‌ಫಿಲ್ ಮಾಡಬೇಕಾಗುತ್ತದೆ. ಅದನ್ನು ಅವರು ಮಾಡುವುದಕ್ಕಾಗುವುದಿಲ್ಲ. ಆದುದರಿಂದ, ಸಚಿವರನ್ನು ಸ್ವಲ್ಪ ಹೊತ್ತು ಈ ಸದನಕ್ಕೆ ಬರಲು ಹೇಳಿ.

ಅಧ್ಯಕ್ಷರು : 7ನೇ ತಾರೀಖು ಈ ಕುರಿತು ವಿವರಣೆ ಕೊಡಲು ನಾನು ಸಚಿವರಿಗೆ ಹೇಳುತ್ತೇನೆ. ಆದುದರಿಂದ, ಸದರಿ ಚರ್ಚೆಯನ್ನು 7ನೇ ತಾರೀಖು ತೆಗೆದುಕೊಳ್ಳೋಣ.

ಶ್ರೀ ಎಸ್.ಎಂ. ಕೃಷ್ಣ : ಸಚಿವರು ಈ ಸದನಕ್ಕೆ ಬರುವವರೆಗೆ ನಾನು ಕೈಗಾ ಬಗ್ಗೆ ಒಂದು ಹೇಳಿಕೆ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಮೊನ್ನೆ ದಿವಸ ಕೆಲವು ವಿಚಾರಗಳ ಕುರಿತು ತಮ್ಮ ಮತ್ತು ಮುಖ್ಯಮಂತ್ರಿಗಳ ಗಮನ ಸೆಳೆದಿದ್ದೆ. ಏನೆಂದರೆ, ನಮ್ಮ ಜಿಲ್ಲೆಯಲ್ಲಿ ಹಾಲು ಉತ್ಪಾದಕರ ನಡುವೆ ನಡೆದಂಥ ಘಟನೆಗಳ ಬಗ್ಗೆ ಮತ್ತು ಹಾಲಿನ ಬೆಲೆಯನ್ನು ನಿಗದಿಪಡಿಸುವುದರ ಬಗ್ಗೆ. ಈ ಕುರಿತು ಇಲ್ಲಿಯವರೆಗೂ ಸರ್ಕಾರದಿಂದ ಉತ್ತೇಜಕ ಪ್ರತಿಕ್ರಿಯೆ ಬಂದಿಲ್ಲ. ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಎರಡನೆಯದಾಗಿ, ಜಮಖಾನ ಮೈದಾನದ ಕುರಿತು ಹೇಳಿಕೆ ಕೊಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಜಮಖಾನ ಮೈದಾನದ ಬಗ್ಗೆ ಹೇಳಿಕೆ ಸಿದ್ಧವಿದೆ, ಹೇಳಿಕೆ ಮಾಡಲು ತಯಾರಿದ್ದೇನೆ. ಮತ್ತು ಹಾಲಿನ ಬೆಲೆ ನಿಗದಿಪಡಿಸುವ ವಿಚಾರದಲ್ಲಿ ತಮ್ಮ ಜೊತೆ ಮಾತನಾಡಿ ಅದಕ್ಕೆ ಏನಾದರೊಂದು ಪರಿಹಾರ ಹುಡುಕೋಣ.

ಶ್ರೀ ಎಂ. ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಒಂದು ಗಮನ ಸೂಚನೆ ಕಳುಹಿಸಿದ್ದೆ. ಏನೆಂದರೆ, ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಇದರ ವೈಸ್ ಚಾನ್ಸಲರ್ ಅವರ ಮೇಲೆ ಗುರುತರವಾದ ಆಪಾದನೆಗಳದ್ದು, ಆಪಾದನೆಗಳಿಗೆ ಅಲ್ಲಿನ ಬೋರ್ಡ್ ಆಫ್ ರೀಜಂಟ್ ನಾಲ್ಕು ಜನ ಸದಸ್ಯರು ಸಹಿ ಮಾಡಿ ಕಳುಹಿಸಿದ್ದಾರೆ. ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಇವೊತ್ತು ಎರಡು ಗಮನ ಸೆಳೆಯುವ ಸೂಚನೆಗಳಿದ್ದು, ಈಗ ತೆಗೆದುಕೊಂಡಿರುವುದರಿಂದ, ತಮ್ಮ ಗಮನ ಸೆಳೆಯುವ ಸೂಚನೆಯನ್ನು ನಾಳೆ ಅಥವಾ ನಾಡಿದ್ದು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದ ಯಕ್ಷಗಾನ ತಂಡದವರು ಬೆಂಗಳೂರಿಗೆ ಬಂದು ಕಳೆದ 10-20 ದಿವಸಗಳಿಂದ ಬೀಡುಬಿಟ್ಟಿದ್ದಾರೆ. ಅವರು ತಮ್ಮ ಯಕ್ಷಗಾನ ಪ್ರದರ್ಶಿಸಲು ನಗರದ ರವೀಂದ್ರ ಕಲಾಕ್ಷೇತ್ರ ಸಿಗುತ್ತಿಲ್ಲ. ಕಲಾಕ್ಷೇತ್ರವನ್ನು ದುರಸ್ತಿಪಡಿಸಬೇಕಾಗಿದೆಯೆಂದು ಹೇಳುತ್ತಿದ್ದಾರೆ. ಇವರು ಬಹಳ ದೊಡ್ಡ ಯಕ್ಷಗಾನ ಕ್ಷೇತ್ರದವರಾಗಿದ್ದು, ಇವರು ತಮ್ಮ ಕಲೆಯನ್ನು ಪ್ರದರ್ಶಿಸಲು ರವೀಂದ್ರ ಕಲಾಕ್ಷೇತ್ರ ಏಕೆ ಸಿಗುವುದಿಲ್ಲ? ಬೇರೆಯವರಿಗೆ ಅಲ್ಲಿ ಅವಕಾಶ ಸಿಗುತ್ತದೆ. ಇವರಿಗೆ ಸಿಗುವುದಿಲ್ಲ. ಈ ಯಕ್ಷಗಾನ ಕಲೆಯನ್ನು ಸ್ವತಃ ಕಣ್ಣಾರೆ ಕಾಣಬೇಕೆಂದು ಕುತೂಹಲಗೊಂಡಂಥ ಅನೇಕ ಜನರಿರುವುದರಿಂದ, ಯಕ್ಷಗಾನ ತಂಡದವರು ತಮ್ಮ ಕಲೆಯನ್ನು ಪ್ರದರ್ಶಿಸಬೇಕೆಂದು ಹಣ ಖರ್ಚು ಮಾಡಿಕೊಂಡು ಇಲ್ಲಿಗೆ ಬಂದು ಪ್ರದರ್ಶನಕ್ಕೆ ಕಲಾಕ್ಷೇತ್ರ ಏಕೆ ಸಿಗುವುದಿಲ್ಲ? ಏಕೆ ಈ ರೀತಿ ಆಗುತ್ತಿದೆಯೆಂದು ನನಗೆ ಗೊತ್ತಾಗುವುದಿಲ್ಲ. ಆದುದರಿಂದ, ಈ ಒಂದು ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಗೃಹಸಚಿವರ ಬಗ್ಗೆ ಕೆಲವು ವಿಚಾರಗಳನ್ನು ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆದರೆ ಅವರು ಇಲ್ಲಿ ಇಲ್ಲ. ಅವರು ಬರುವವರೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಕೈಗಾದ ಬಗ್ಗೆ ಹೇಳಿಕೆಯನ್ನು ಮಾಡಿದರೆ ಒಳ್ಳೆಯದು. ಏಕೆಂದರೆ ಇದನ್ನು ಬಿಟ್ಟು ಗಮನ ಸೆಳೆಯುವ ಸೂಚನೆಗೆ ಹೋದರೆ ಕಾರ್ಯಪಟ್ಟಿಯಲ್ಲಿ ತೊಂದರೆಯಾಗುತ್ತದೆ. ಅವರ ಪ್ರಾಮುಖ್ಯತೆಯು ಹೊರಟುಹೋಗುತ್ತದೆ. ಆದ್ದರಿಂದ ಅವರು ಕೈಗಾದ ಬಗ್ಗೆ ಸ್ಟೇಟ್‌ಮೆಂಟ್ ಮಾಡಿದರೆ ಒಳ್ಳೆಯದು.

ಉಪಾಧ್ಯಕ್ಷರು : 7ನೇ ತಾರೀಖು ಗೃಹ ಸಚಿವರು ಹೇಳಿಕೆಯನ್ನು ಕೊಡುತ್ತಾರೆ.

ಶ್ರೀ ಆರ್.ವಿ.ದೇಶಪಾಂಡೆ : 7ನೇ ತಾರೀಖು ಆಗುವುದಿಲ್ಲ. ಇವತ್ತೆ ಮಾಡಿದರೆ ಒಳ್ಳೆಯದು. ಅಂದು ಮಾಡಿದರೆ ಬಹಳ ದಿನಗಳಾಗುತ್ತದೆ. ಮಂತ್ರಿಗಳಿದ್ದರೆ ಕರೆಸಿಬಿಡಿ.